**ಕವಿತೆ**



## ಅಭಿಷೇಕ ಬಳೆ ಮಸರಕಲ್

ಕಲೆ: ಗುರು ರಾಘವೇಂದ್ರ



# ಎಷ್ಟೊಂದು ಮುಖಗಳು ಈ ರಾತ್ರಿ ಕಣ್ಣಿಗೆ

ಮಂಜು ಮುಸುಕದ ಸಂಜೆ
ಈ ರಾತ್ರಿ,
ತನ್ನ ಕೊನೆ ದಿನವನ್ನು ಎಣಿಸುತ್ತಿರುವ ಬೀದಿ ದೀಪ
ಮರು ಜೀವ ಪಡೆದುಕೊಳ್ಳುತ್ತಿರುವ ಹುಣ್ಣಿಮೆ ಚಂದ್ರ
ಮಿಡ್‌ನೈಟ್ ಸೊಳ್ಳೆಗಳ ಸಂಗೀತ
ನಾಯಿಗಳ ಆರ್ಕೆಸ್ಟ್ರಾ
ಒಂದೇ ರಾಗದಲ್ಲಿ ಅಳುತ್ತಿರುವ ಬೆಕ್ಕು
ಗೋಡೆಗೆ ಎಸೆದ ಚೆಂಡಿನಂತೆ ವಾಪಾಸು
ಮುಖಕ್ಕೆ ಬಡಿವ ಕೌದಿಯೊಳಗಿನ ಉಸಿರು ಗೊರಕೆ

ಗಾಯಗೊಂಡ ಬೆರಳಿಗೆ ಕ್ಯೂ ನಿಲ್ಲುವ ಕೆಂಪಿರುವೆ
ಕನಸಿನಲ್ಲಿ ಭಯ ಬೀಳಿಸುವ
ಮೊನ್ನೆ ಮೊನ್ನೆ ಮನೆ ಮುಂದೆ ಹಾದು ಹೋದ ಹೆಣದ ಮೆರವಣಿಗೆ

ಒಮ್ಮೆಲೆ ಎಲ್ಲವನ್ನೂ ಕಳೆದುಕೊಳ್ಳುವ ಸಿನಿಮಾದ ಕಥಾನಾಯಕನಂತೆ
ಬೆಳಕನ್ನು ಕಳೆದುಕೊಂಡು ಕತ್ತಲನ್ನು ತೊಟ್ಟು ನಿಂತ
ಇಡೀ ಊರು



ಎದುರು ಮನೆಯ ಗಂಡಹೆಂಡಿರ ಜಗಳ
ಹಿಂದಿನ ಮನೆಯ ಪ್ರೇಮಿಯ ಪಿಸು ಮಾತು
ಆದೆಲ್ಲೋ ದೂರದಲ್ಲಿ ಟ್ರ್ಯಾಕ್ಟರ್‌ನಿಂದ
ಕೇಳಿ ಬರುತ್ತಿರುವ,
'ಹೊತ್ತಾದ ಮ್ಯಾಲ ಗೊತ್ತಾಗದ್ಹಾಂಗ ಬಂದು ಮುತ್ತು ಕೊಡಲೇನ' ಹಾಡು

ಊರ ದೈವದ ಗುಡಿಯಲ್ಲಿ ಡೊಳ್ಳು ಗಂಟೆ ಶಂಖನಾದ
ಹೊತ್ತಲ್ಲದ ಹೊತ್ತಲ್ಲಿ
ಹೀಗೆ ಚದುರಿ ನಿಲ್ಲುವ ಕವಿತೆ ಸಾಲುಗಳು
ಅಬ್ಬಾ...
ಎಷ್ಟೊಂದು ಮುಖಗಳು
ಈ ರಾತ್ರಿ ಕಣ್ಣಿಗೆ!